# ಬೆಂಗಳೂರು ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರ, ದೇವನಹಳ್ಳಿ

ಸಂ:ಬಿಐಎಪಿಎ/ಟಿಪಿ/ಇತರೆ/01/2013-14

ದಿನಾಂಕ: 19-08-2013

## ಸಾರ್ವಜನಿಕ ಪ್ರಕಟಣೆ

ಬೆಂಗಳೂರು ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರವು ಸರ್ಕಾರದ ಅಧಿಸೂಚನೆ ಸಂಖ್ಯೆ: ನಅಇ 142 ಎಂಎನ್‌ಎಕ್ಸ್ 95 ದಿನಾಂಕ: 12-01-1996 ರಂದು ಸ್ಥಳೀಯ ಯೋಜನಾ ಪ್ರದೇಶವನ್ನು ಘೋಷಿಸಲಾಗಿದ್ದು ದಿನಾಂಕ: 29-02-1996 ರಂದು ಯೋಜನಾ ಪ್ರಾಧಿಕಾರವನ್ನು ರಚಿಸಲಾಗಿರುತ್ತದೆ. ಸದರಿ ಯೋಜನಾ ಪ್ರದೇಶಕ್ಕೆ ಕೆಲವೊಂದು ಗ್ರಾಮಗಳನ್ನು ಸೇರಿಸಿ ಅಧಿಸೂಚನೆ ಸಂಖ್ಯೆ: ನಅಇ/142/ಎಂಎನ್‌ಎಕ್ಸ್/95 ದಿನಾಂಕ: 14-05-1997 ರಂತೆ ಕಾರ್ಯ ವ್ಯಾಪ್ತಿಯನ್ನು ವಿಸ್ತರಿಸಿ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಸೆಕ್ಷನ್ 4(ಸಿ) ರಡಿಯಲ್ಲಿ ಅಂತಿಮವಾಗಿ ದೇವನಹಳ್ಳಿ ತಾಲ್ಲೂಕಿನ 214 ಗ್ರಾಮಗಳು, ದೊಡ್ಡಬಳ್ಳಾಪುರ ಕಸಬಾ ಹೋಬಳಿಯ 67 ಗ್ರಾಮಗಳು ಮತ್ತು ಬೆಂಗಳೂರು ಉತ್ತರ ತಾಲ್ಲೂಕಿನ ಜಾಲ ಮತ್ತು ಹೆಸರಘಟ್ಟ ಹೋಬಳಿಯ 60 ಗ್ರಾಮಗಳು ಒಟ್ಟು 347 ಗ್ರಾಮಗಳನ್ನು ಒಳಗೊಂಡಿದ್ದು 792 ಚ.ಕಿ.ಮೀ. ವಿಸ್ತೀರ್ಣ ಹೊಂದಿದೆ. 2001 ರ ಜನಗಣತಿಯ ಪ್ರಕಾರ ಸದರಿ ಯೋಜನಾ ಪ್ರದೇಶದ ಜನ ಸಂಖ್ಯೆ ಸುಮಾರು 3,93,705 ಆಗಿರುತ್ತದೆ. ಸದರಿ ಯೋಜನಾ ಪ್ರದೇಶದಲ್ಲಿ ಕೆಳಕಂಡ ಸ್ಥಳೀಯ ಸಂಸ್ಥೆಗಳು ಕಾರ್ಯನಿರ್ವಹಿಸುತ್ತಿವೆ.

ದೇವನಹಳ್ಳಿ ಪುರಸಭೆ,

ವಿಜಯಪುರ ಪುರಸಭೆ,

ದೊಡ್ಡಬಳ್ಳಾಪುರ ನಗರಸಭೆ,

ಇವುಗಳ ಜೊತೆಗೆ 43 ಗ್ರಾಮ ಪಂಚಾಯಿತಿಗಳು ಇವೆ.

ಸದರಿ ಸ್ಥಳೀಯ ಯೋಜನಾ ಪ್ರದೇಶಕ್ಕೆ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ರ ಸೆಕ್ಷನ್ 13 ರನ್ವಯ ಮಹಾಯೋಜನೆಯನ್ನು ತಯಾರಿಸಿದ್ದು, ಸದರಿ ಮಹಾಯೋಜನೆ ಮತ್ತು ವಲಯ ನಿಯಮಾವಳಿಗೆ ಸರ್ಕಾರದ ಆದೇಶ ಸಂಖ್ಯೆ: ನಅಇ 24 ಬಿಎಂಆರ್ 2001 ದಿನಾಂಕ: 13-09-2004 ಮತ್ತು ತಿದ್ದುಪಡಿ ಅದೇಶ ದಿನಾಂಕ: 17-09-2004 ರಂತೆ ಪ್ರಾಧಿಕಾರದ ಸ್ಥೂಲಾಭಿವೃದ್ಧಿ ಯೋಜನಾ ನಕ್ಷೆಗೆ ಅನುಮೋದನೆ ನೀಡಲಾಗಿದ್ದು ತದನಂತರ ಸರ್ಕಾರದ ಆದೇಶ ಸಂಖ್ಯೆ: ನಅಇ 157 ಬಿಎಂಆರ್ 2009 ಬೆಂಗಳೂರು, ದಿನಾಂಕ:27-01-2009 ಮತ್ತು ತಿದ್ದುಪಡಿ ಆದೇಶ ದಿನಾಂಕ: 29-01-2009 ರಂತೆ ಅಂತಿಮ

ಅನುಮೋದನೆಯನ್ನು ನೀಡಲಾಗಿರುತ್ತದೆ. ಸದರಿ ಮಹಾಯೋಜನೆಯನ್ವಯ ಬೆಂಗಳೂರು ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರದ ಸ್ಥಳೀಯ ಯೋಜನಾ ಪ್ರದೇಶದಲ್ಲಿ ಯಾವುದೇ ಅಭಿವೃದ್ಧಿಗಳನ್ನು ಕೈಗೊಳ್ಳುವ ಮುನ್ನ. ಪ್ರಾಧಿಕಾರದ ರಚನೆಗೂ ಮುನ್ನ ಖಾಸಗಿ ವಿನ್ಯಾಸಗಳನ್ನು ಬಿಎಂಆರ್‌ಡಿಎ ಕಾಯ್ದೆ, 1985 ಸೆಕ್ಷನ್ 10 ರಂತೆ ಹಾಗೂ ಬೆಂಗಳೂರು ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರ ರಚನೆಯಾದ ನಂತರ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ರ ಸೆಕ್ಷನ್ 17 ರಂತೆ ವಿನ್ಯಾಸಗಳಿಗೆ ನಿಯಮನುಸಾರ ಅನುಮೋದನೆ ನೀಡಲಾಗುತ್ತಿದೆ. ಈ ರೀತಿ ಅನುಮೋದನೆ ನೀಡುವಾಗ ಸರ್ಕಾರದ ಸುತ್ತೋಲೆ ಸಂಖ್ಯೆ:ನ.ಅ.ಇ 112 ಬೆಂರೂಪ್ರಾ 2005, ದಿನಾಂಕ: 26–05–2005 ರಂತೆ ಎರಡು ಹಂತಗಳಲ್ಲಿ (60% + 40% ಅನುಪಾತದಲ್ಲಿ) ನಿವೇಶನಗಳನ್ನು ಬಿಡುಗಡೆ ಮಾಡುತ್ತಿದ್ದು, ಕನಿಷ್ಟ 02 ವರ್ಷಗಳ ಅವಧಿಯಲ್ಲಿ ಎಲ್ಲಾ ಮೂಲಭೂತ ಸೌಕರ್ಯಗಳನ್ನು ಒದಗಿಸಿ ಅಭಿವೃದ್ಧಿ ಪಡಿಸಬೇಕಾಗಿರುತ್ತದೆ. ತಪ್ಪಿದಲ್ಲಿ ಪ್ರಾಧಿಕಾರದ ಅನುಮೋದನೆ ಪಡೆದು ನವೀಕರಣದೊಂದಿಗೆ ಗರಿಷ್ಟ 05 ವರ್ಷಗಳ ಅವಧಿಯೊಳಗಾಗಿ ಸಂಪೂರ್ಣವಾಗಿ ಅಭಿವೃದ್ಧಿ ಕಾರ್ಯಗಳನ್ನು ಪೂರ್ಣಗೊಳಿಸಬೇಕಾಗಿರುತ್ತದೆ.

ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಯಲ್ಲಿ ಬರುವ ಗ್ರಾಮಗಳ ವಿವರ ಹಾಗೂ ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರ/ಬೆಂಗಳೂರು ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರದಿಂದ ಅನುಮೋದನೆಯಾದ ವಿನ್ಯಾಸಗಳ ಪಟ್ಟಿಯನ್ನು ಪ್ರಾಧಿಕಾರದ ವೆಬ್‌ಸೈಟ್ ವಿಳಾಸ: www.biaapa.in ರಲ್ಲಿ ಪ್ರಕಟಿಸಲಾಗಿದೆ. ವಿನ್ಯಾಸ ಅನುಮೋದನೆ ಸಮಯದಲ್ಲಿ ಶೇ 60 ನಿವೇಶನಗಳನ್ನು ನಿಬಂಧನೆಗಳೊಂದಿಗೆ ಬಿಡುಗಡೆ ಮಾಡಲಾಗುತ್ತಿದ್ದು, ಇವುಗಳ ಅಧಾರದ ಮೇಲೆ ಅಭಿವೃದ್ಧಿದಾರರು ನಿವೇಶನಗಳನ್ನು ಮಾರಾಟ ಮಾಡಿ ಎಲ್ಲಾ ಅಭಿವೃದ್ಧಿ ಕಾರ್ಯಗಳನ್ನು ಪೂರ್ಣಗೊಳಿಸಿ ಉಳಿಕೆ ಶೇ 40 ನಿವೇಶನಗಳನ್ನು ಬಿಡುಗಡೆ ಪಡೆಯಬೇಕಾಗಿರುತ್ತದೆ. ಪ್ರಸ್ತುತ ಸರ್ಕಾರದ ಹೊಸ ಸುತ್ತೋಲೆ ಸಂಖ್ಯೆ: ನಅಇ 599 ಮೈಅಪ್ರಾ 2012, ದಿನಾಂಕ: 03–12–2012 ರನ್ವಯ ವಿನ್ಯಾಸ ಅನುಮೋದನೆ 03 ಹಂತಗಳಲ್ಲಿ 40%, 30% ಹಾಗೂ 30% ರ ಅನುಪಾತದಂತೆ ನಿವೇಶನಗಳನ್ನು ಬಿಡುಗಡೆ ಮಾಡಲಾಗುತ್ತದೆ.

ಆದರೆ, ಹಲವು ಪ್ರಕರಣಗಳಲ್ಲಿ ಅಭಿವೃದ್ಧಿದಾರರು ನಿಗದಿತ ವೇಳೆಯಲ್ಲಿ ಅಭಿವೃದ್ಧಿ ಕಾಮಗಾರಿಗಳನ್ನು ಪೂರೈಸದೇ ನಿವೇಶನಗಳನ್ನು ಮಾರಾಟ ಮಾಡಿ ಹಾಗೂ ಪ್ರಾಧಿಕಾರದಿಂದ ಉಳಿಕೆ ಶೇ 40 ರಷ್ಟು ನಿವೇಶನಗಳನ್ನು ಬಿಡುಗಡೆ ಪಡೆಯದೆ ನಿವೇಶನಗಳನ್ನು ಸಾರ್ವಜನಿಕರಿಗೆ ಮಾರಾಟ ಮಾಡುವುದು ತಿಳಿದು ಬಂದಿದ್ದು, ಇದರಿಂದ ಸಾರ್ವಜನಿಕರು ಮೂಲಭೂತ ಸೌಕರ್ಯಗಳಿಂದ ವಂಚಿತರಾಗುತ್ತಿರುವುದು ಕಂಡುಬಂದಿದೆ. ಈ ರೀತಿ ಹಲವಾರು ಪ್ರಕರಣಗಳಲ್ಲಿ ಸಾರ್ವಜನಿಕರಿಂದ ದೂರುಗಳನ್ನು ಸ್ವೀಕರಿಸಲಾಗಿದೆ. ಪ್ರಸ್ತುತ ಇಂತಹ ಪ್ರಕರಣಗಳಲ್ಲಿ ಪ್ರಾಧಿಕಾರದಿಂದ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ ಸೆಕ್ಷನ್ 17(4) ರನ್ವಯ ನೋಟೀಸ್ ಜಾರಿ ಮಾಡಿ ಸಂಬಂಧಪಟ್ಟವರ ವಿರುದ್ಧ ನಿಯಮಾನುಸಾರ ಹಾಗೂ ಕಾಯ್ದೆಯ ಅವಕಾಶಗಳಡಿ ಕ್ರಮ ತೆಗೆದುಕೊಳ್ಳಲಾಗುತ್ತಿದೆ. ಈ ಹಿನ್ನಲೆಯಲ್ಲಿ ಇನ್ನು ಮುಂದೆ ಖಾಸಗಿ ಬಡಾವಣೆಗಳಲ್ಲಿ ನಿವೇಶನಗಳನ್ನು ಸಾರ್ವಜನಿಕರು ಖರೀದಿಸುವ ಮುನ್ನ ಬಡಾವಣೆಗಳು ಅನುಮೋದನೆಯಾಗಿರುವ ಬಗ್ಗೆ ಹಾಗೂ ಎಲ್ಲಾ ಅಭಿವೃದ್ಧಿ ಕಾಮಗಾರಿ ಅಂದರೆ, ರಸ್ತೆ, ನೀರು ಸರಬರಾಜು, ಒಳಚರಂಡಿ ವ್ಯವಸ್ಥೆ, ವಿದ್ಯುತ್ ಸಂಪರ್ಕ ಹಾಗೂ ಉದ್ಯಾನವನ ಅಭಿವೃದ್ಧಿ ಆಗಿರುವ ಬಗ್ಗೆ ಖಚಿತಪಡಿಸಿಕೊಂಡು ಹಾಗೂ ವಿನ್ಯಾಸದಲ್ಲಿನ ನಿವೇಶನಗಳನ್ನು ಬಿಡುಗಡೆ ಮಾಡಿರುವ ಬಗ್ಗೆ ಪ್ರಾಧಿಕಾರದಿಂದ ದೃಢೀಕರಿಸಿಕೊಂಡ ನಂತರವೇ ನಿವೇಶನಗಳನ್ನು ಖರೀದಿಸುವುದು. ಒಂದು ವೇಳೆ ನಿಯಮಗಳ ವಿರುದ್ಧವಾಗಿ ರಚಿಸಿರುವ ಮತ್ತು ಅಭಿವೃದ್ಧಿಯಾಗದಂತಹ ಬಡಾವಣೆಗಳಲ್ಲಿ ನಿವೇಶನಗಳನ್ನು ಖರೀದಿಸಿದಲ್ಲಿ ಮುಂದೆ ಆಗುವ ಆಗು–ಹೋಗುಗಳಿಗೆ ಪ್ರಾಧಿಕಾರವು ಜವಾಬ್ದಾರವಾಗಿರುವುದಿಲ್ಲವೆಂದು ಈ ಮೂಲಕ ಸ್ಪಷ್ಟೀಕರಣ ನೀಡಲಾಗಿದೆ.

ನಗರ ಮತ್ತು ಗ್ರಾಮಾಂತರ ಯೋಜನಾ
ಜಂಟಿ ನಿರ್ದೇಶಕರು ಹಾಗೂ ಸದಸ್ಯ ಕಾರ್ಯದರ್ಶಿ,
ಬೆಂಗಳೂರು ಅಂತರ ರಾಷ್ಟ್ರೀಯ ವಿಮಾನ
ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರ,
ದೇವನಹಳ್ಳಿ